ಶ್ರೀ ವಿ. ವಿ. ಪಕ್ಕಾರ್.— ನನ್ನ ಅಭಿಪ್ರಾಯದಲ್ಲಿ ಈ ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾದರೆ ಅಲ್ಲಿಗೆ ಒಬ್ಬರು ವಿಶೇಷಾಧಿಕಾರಿಯನ್ನು ನೇಮಿಸಬೇಕಾಗುತ್ತದೆ. ಏಕೆಂದರೆ, ಆ ಕಾಯಿದೆಯನ್ನು ಇಲ್ಲಯವರೆಗೆ ಕೈಗಾರಿಕಾ ಇಲಾಖಾ ಆಥವಾ ಕಂದಾಯ ಇಲಾಖಾ ಅಧಿಕಾರಿಗಳಿಂದ ಅದನ್ನು ಜಾರಿಗೆ ಕೊಡಲು ಇನ್ನೂ ಸಾಧ್ಯವಾಗಿಲ್ಲ. ಅಲ್ಲಿ ಹೆಚ್ಚು ಸಮಸ್ಯೆಗಳಿವೆ. ಹಣದಿಂದ ಅಧಿಕಾರಿಗಳನ್ನು ಕೊಂಡು ಕಾಯಿದೆ ಜಾರಿಯಾಗದಂತೆ ಮಾಡುತ್ತೇವೆ ಎಂದು ವಿದ್ಯುತ್ ಯಂತ್ರಗಳ ಮಾಲೀಕರು ಹೇಳುತ್ತಿದ್ದಾರೆ. ಆದುದರಿಂದ ಅಲ್ಲಿಗೆ ಒಬ್ಬರು ವಿಶೇಷಾಧಿಕಾರಿಯನ್ನು ನೇಮಿಸುವುದರ ಜೊತೆಗೆ ಒಬ್ಬರು ವಿಶೇಷ ಪ್ರಾಸಿಕ್ಯೂಟರನ್ನೂ ನೇಮಿಸಬೇಕು. ಇಲ್ಲದಿದ್ದರೆ ಅಲ್ಲಿ ಬಡಪರ ಉದ್ಧಾರ ವಾಗುವುದಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ಕಾಯಿದೆಯನ್ನು ಜಾರಿಗೆ ಕೊಡಲು ಪರಿಣಾಮಕಾರಿಯಾದ ಕ್ರಮ ಗಳನ್ನು ತೆಗೆದುಕೊಳ್ಳಲಾಗುವುದು. ಜಂಟಿ ನಿರ್ದೇಶಕರ ಮಟ್ಟದ ಒಬ್ಬ ವಿಶೇಷ ಅಧಿಕಾರಿಯೊಬ್ಬರು ಅಲ್ಲಿದ್ದಾರೆ. ಅವರಿಂದ ವರದಿ ತರಿಸಿಕೊಂಡು ಏನಾದರೂ ತೊಂದರೆ ಇದ್ದರೆ ಅದನ್ನು ಪರಿಹರಿಸುವುದಕ್ಕೆ ಮತ್ತು ಶ್ರೇಷ್ಠ ನ್ಯಾಯಾಲಯದ ತೀರ್ಮಾನವನ್ನು ಜಾರಿ ಮಾಡುವುದಕ್ಕೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಮುಂತ್ರಿಸಪೆಂಡಿಮಠ್.— ಮಾನ್ಯ ಸದಸ್ಯರು ಹೇಳಿದ ಸಮಸ್ಯೆ ಬಹುಶ: ರಬಕ ಮತ್ತು ಬನಹಟ್ಟಿಗಳಲ್ಲಿರಬಹುದು. ಆದರೆ, ಗದಗ ಮತ್ತು ಬೆಟಗೇರಿಯಲ್ಲಿರುವ ವಿದ್ಯುತ್ ಯಂತ್ರಗಳಲ್ಲಿ ಸಾವಿರಾರು ಜನ ಕಾರ್ಮಿಕರು ದುಡಿಯುತ್ತಿದ್ದಾರೆ. ಅಲ್ಲದೇ ಒಂದೇ ಮನೆಯಲ್ಲಿ ವಿದ್ಯುತ್ ಮಗ್ಗಗಳೂ ಮತ್ತು ಕೈ ಮಗ್ಗಗಳೂ ನಡೆಯುತ್ತಿರುತ್ತವೆ. ಅಂಥಾ ಕಡೆ ಇಂಥಾ ಸಮಸ್ಯೆ ಇಲ್ಲ. ಆದರೆ, ಕೇವಲ ವಿದ್ಯುತ್ ಮಗ್ಗಗಳಲ್ಲಿ ಕೆಲಸ ಮಾಡುತ್ತಿದ್ದ ಐದಾರು ಸಾವಿರ ಜನ ನೌಕರರು ಇಂದು ನಿರುದ್ಯೋಗಿ ಗಳಾಗಿದ್ದಾರೆ. ಆದುದರಿಂದ, ಈ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ, ರಾಜ್ಯ ಮಟ್ಟದಲ್ಲಿ ಕೈಮಗ್ಗ ನಿಗಮವಿರುವಂತೆ ಒಂದು ವಿದ್ಯುತ್ ಮಗ್ಗದ ನಿಗಮವನ್ನು ಸ್ಥಾಪನೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಆರ್. ಗುಂಡೂರಾವ್.— ಗದಗ್‌ನ ವಿದ್ಯುತ್ ಮಗ್ಗದ ಮಾಲೀಕರು ಸರ್ಕಾರದ ಆದೇಶ ವನ್ನು ಶ್ರೇಷ್ಟ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ. ಸರ್ಕಾರ ಶ್ರೇಷ್ಟ ನ್ಯಾಯಾಲಯದ ತೀರ್ಮಾನ ವನ್ನು ನಿರೀಕ್ಷೆ ಮಾಡುತ್ತಿದೆ. ಆದರೂ, ಮಾನ್ಯ ಸದಸ್ಯರು ಹೇಳಿದಂತೆ ಒಂದೇ ಮನೆಯಲ್ಲಿ ಎರಡು ರೀತಿಯ ಮಗ್ಗಗಳನ್ನೂ ನಡೆಸುತ್ತಿದ್ದು, ಅವುಗಳಲ್ಲಿ ಕೆಲವು ಮುಚ್ಚಿದ್ದು ಕೆಲವು ಮುಚ್ಚಿಲ್ಲದಿರುವ ಬಗೆ ವಿಚಾರ ಮಾಡಲಾಗುವುದು.

Constitution of Expert Committee in the State

480 SRI M. C. BASAPPA (Chamarajanagar).—Will the Chief Minister be pleased to state:

(a) whether an expert committee was constitued to study the problems of Farmers in the State and to suggest remedies for the same ;

(b) whether any interim Report is submitted by the said Committee :

(c) if so whether the Government have accepted the Recommendations in full ;

(d) if not, what are the recommendations accepted and implemented by Government ;

(e) the time required to finalise the Report ?

SRI R. GUNDU RAO (Chief Minister).—

(a) Yes.

(b) Yes.

(c) No.

(d) A detailed study of the interim report has been done by the Government and only feasible recommendations have been accepted and implemented by the Government keeping in view the financial position of the State.

(e) This question does not arise as the committee has been dissolved by the Government.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಬೇಸಾಯಗಾರರ ಸಮಸ್ಯೆಗಳನ್ನು ಅಧ್ಯಯನ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಿಸಿದಿರಿ. ಸಮಿತಿ ತಾತ್ಕಾಲಿಕ ವರದಿ ಕೂಡ ಕೊಟ್ಟಿದೆ. ಆದರಲ್ಲಿ ಕೆಲವು ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆ. ಜಾರಿಗೆ ಕೊಟ್ಟಿರತಕ್ಕ ಶಿಫಾರಸ್ಸುಗಳು ಏನು ?

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಮುಖ್ಯ ಮಂತ್ರಿಗಳ ಪರವಾಗಿ).—ಅಧ್ಯಕ್ಷರೇ, ಬಂಗಾರಪ್ಪ ಸಮಿತಿ ರೈತರಿಗೆ, ವ್ಯವಸಾಯಗಾರರಿಗೆ ಏನು ರಿಯಾಯಿತಿಗಳನ್ನು ಕೊಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಆದರಲ್ಲಿ ಈ ಕೆಳಗೆ ಕಂಡಂತೆ ರಿಯಾಯಿತಿಗಳನ್ನು ಸರ್ಕಾರ ಜಾರಿಗೆ ಕೊಟ್ಟಿದೆ. ಬೆಟರ್‌ಮೆಂಟ್ ಲೆವಿ ರದ್ದು ಮಾಡಿದೆ. ನೀರಿನ ತೆರಿಗೆಯನ್ನು ರಿವೈಸ್ ಮಾಡಿದೆ. ಷುಗರ್ ಕೇನ್ ಪರ್ಚೇಸ್ ಟ್ಯಾಕ್ಸ್ ಒಂದು ಟನ್ ಕಬ್ಬಿಗೆ ೧೨ ರೂಪಾಯಿ ನಿಗದಿ ಮಾಡಿದೆ. ಅಲ್ಲದೆ, ಭತ್ತ, ರಾಗಿ, ಮುಸುಕಿನ ಜೋಳ, ಜೋಳ ಮತ್ತು ಕಡಲೆಕಾಯಿಗೆ ಬೆಂಬಲ ಬೆಲೆಯನ್ನು ಗೊತ್ತುಮಾಡಿದೆ. ಉತ್ತಮ ಭತ್ತಕ್ಕೆ ೧೨೦ ರೂ. ಮಧ್ಯಮ ಭತ್ತಕ್ಕೆ ೧೦೮ ರೂ. ಸಾಧಾರಣ ಭತ್ತಕ್ಕೆ ೧೧೫ ರೂ. ರಾಗಿಗೆ ೧೧೫ ರೂ. ಮುಸುಕಿನ ಜೋಳಕ್ಕೆ ೧೧೫ ರೂ. ಜೋಳಕ್ಕೆ ೧೧೫ ರೂ. ಕಡಲೆಕಾಯಿಗೆ ೨೫೦ ರೂ. ನಿಗದಿ ಮಾಡಲಾಗಿದೆ. ಆಹಾರ ನಿಗಮಕ್ಕೆ ಆಹಾರಧಾನ್ಯಗಳನ್ನು ಕೊಳ್ಳುವುದಕ್ಕಾಗಿ ೨೪ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಸಹಕಾರ ಸಂಘಗಳಲ್ಲಿ ಸಾಲದಾರರಾಗಿರುವ ಸಣ್ಣ ಮತ್ತು ಮಧ್ಯಮ ವರ್ಗದ ರೈತರುಗಳ ಸಾಲ ವಸೂಲಾತಿಯನ್ನು ಮುಂದೂಡಲಾಗಿದೆ. ಮತ್ತು ರಿಕವರಿ ಆಫ್ ಸೀಡ್ ಲೋನ್ಸ್, ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಬಿತ್ತನೆ ಬೀಜ ಕೊಳ್ಳುವುದಕ್ಕೆ ಕೊಟ್ಟಿದ್ದ ಸಾಲವನ್ನು ವೇವ್ ಮಾಡಿದೆ. Sales tax on fertilisers is reduced from 3% to 2%. Agricultural income tax waived in respect of dry lands where crops including commercial crops such as Groundnut, Cotton, Chilli, Castor and Mustard are grown. ಜೊತೆಗೆ ವ್ಯವಸಾಯ ತೆರಿಗೆಯನ್ನು ರದ್ದು ಮಾಡಿದೆ. Electricity tariff is reduced for all I. P. sets upto 10 H. P. except where pump sets have been used to lift water from rivers, streams etc., ಒಂದು ಹೆಚ್. ಪಿ. ಗೆ ೫೦ ರೂಪಾಯಿ ಎಂದು flat rate ನಿಗದಿ ಮಾಡಿ, ನೀರಾವರಿ ಪಂಪ್‌ಸೆಟ್ಟುಗಳಿಗೆ ರಿಯಾಯಿತಿ ಕೊಡಲಾಗಿದೆ. ಇತರ ನೀರಾವರಿಗೂ ಕೂಡ ರಿಯಾಯಿತಿ ಕೊಡುವುದನ್ನು ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ಎಂ.ಸಿ. ಬಸಪ್ಪ.—ಸರ್ಕಾರದವರು ಸಮಿತಿಯ ತಾತ್ಕಾಲಿಕ ವರದಿಯ ಮೇಲೆ ಕ್ರಮ ತೆಗೆದು ಕೊಂಡಿದ್ದಾರೆ. ಆದರೆ, ರೈತರ ಸಮಸ್ಯೆಗಳನ್ನು ಸಂಪೂರ್ಣವಾಗಿ ನಿವಾರಣೆ ಮಾಡಬೇಕಾಗಿದ್ದರೆ, ಒಂದು ಅಂತಿಮವಾದ ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಈ ದಿಸೆಯಲ್ಲಿ ಸರ್ಕಾರದವರಿಂ ಯೋಚನೆ ಮಾಡುವರೆ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ಸರ್ಕಾರ ರೈತರಿಗೆ ಕೊಡಬೇಕಾದ ರಿಯಾಯಿತಿಗಳನ್ನು ಕೊಟ್ಟಿದೆ. ಸಮಿತಿಯನ್ನು ರದ್ದು ಮಾಡಿದ ಮೇಲೆ ಮುಂದೆ ಏನು ಮಾಡಬೇಕೆನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಸರ್ಕಾರದವರು ರಿಯಾಯ್ತಿ ಕೊಟ್ಟಿದ್ದಾರೆ. ರೈತನ ಎಲ್ಲಾ ಸಮಸ್ಯೆಗಳನ್ನು ಅಂತಿಮವಾಗಿ ನಿವಾರಣೆ ಮಾಡಿದೆಯೆಂದು ಸರ್ಕಾರ ತಿಳಿದುಕೊಳ್ಳುವುದು ಸರಿಯಲ್ಲ. ರೈತನ ಸಮಸ್ಯೆಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಒಂದು ಅಂತಿಮ ವರದಿಯನ್ನು ಸರ್ಕಾರ ತೆಗೆದುಕೊಳ್ಳುವುದು ಅವಶ್ಯಕ. ಸರ್ಕಾರದವರು ರೈತನು ಬೆಳೆದಂತ ಬೆಲೆಗೆ ಗೊತ್ತುಮಾಡಿದಂತ ಧಾರಣೆವಾಸಿಗಳ ಬೆಲೆಗಳನ್ನು ಒಪ್ಪಿಲ್ಲ. ಒಂದೆರಡು ಐಟಂಗಳಿಗೆ ಒಪ್ಪಿರಬಹುದು. ಈ ದೃಷ್ಟಿಯಿಂದ ಸಮಗ್ರವಾದ ಒಂದು ವರದಿಯನ್ನು ಪಡೆಯಲು ಒಂದು ಸಮಿತಿಯನ್ನು ನೇಮಕ ಮಾಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ಸರ್ಕಾರ ಸಾಕಷ್ಟು ಅಭ್ಯಾಸವನ್ನು ರೈತರ ಬಗ್ಗೆ ಮಾಡಿದೆ. ಧಾರಣೆವಾಸಿಗಳ ಬೆಲೆ ನಿಗದಿ ಮಾಡುವಂತಾದ್ದು, ಭಾರತ ಸರ್ಕಾರವನ್ನು ಅವಲಂಬಿಸಿದೆ. ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನೂ ಕೂಡ ಅವಲಂಬಿಸಿದೆ. ರೈತರಿಗೆ ಇನ್ನೂ ಏನು ಮಾಡಬೇಕೆಂಬುದನ್ನು ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ವಿ. ಎಲ್. ಶಿವಪ್ಪ.—ಕಳೆದ ಮೂವತ್ತು ವರ್ಷಗಳಿಂದಲೂ ಈ ಒಂದು ವರ್ಗವನ್ನು ಉದಾಸೀನ ಮಾಡಿಕೊಂಡೇ ಬರಲಾಗಿದೆ. ೮೦ ಭಾಗ ನಂಬಿರತಕ್ಕ ವ್ಯವಸಾಯ ಕಸುಬಿಗೆ ಸರ್ಕಾರ ಸಮಗ್ರವಾದ ಒಂದು ವರದಿಯನ್ನು ತರಿಸಿಕೊಂಡು, ಅವರ ಅಭಿವೃದ್ಧಿಗೆ ಹೆಚ್ಚು ಗಮನಹರಿಸಬೇಕೆಂದು ಹೇಳುತ್ತೇನೆ. ಇವತ್ತು ರೈತನ ಅಭಿವೃದ್ಧಿ ಆಗದೇ ಹೋದರೆ, ದೇಶಕ್ಕೆ ಹಾನಿಯಾಗುತ್ತದೆ. ಈಗಿನ ಯೋಜನೆಗಳನ್ನು ಗಮನಿಸಿದರೆ ಇನ್ನೂ ೩೦ ವರ್ಷಗಳು ರೈತನ ಅಭಿವೃದ್ಧಿಯಾಗುವುದಿಲ್ಲವೆಂದು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಸ್ವಾಮಿ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರ ಆತಂಕ ನಮಗೆ ಪೂರ್ಣವಾಗಿ ಅರ್ಥವಾಗಿದೆ. ಯಾವ ಸರ್ಕಾರವೂ ಮಾಡದೇ ಇರತಕ್ಕ, ಯಾವ ಮುಖ್ಯಮಂತ್ರಿಗಳು ಕೊಡದೇ ಇರತಕ್ಕ ರಿಯಾಯಿತಿಗಳನ್ನು ಈ ಸರ್ಕಾರ ಕೊಟ್ಟಿದೆ. ಮೂವತ್ತು ವರ್ಷಗಳು ಏತಕ್ಕೆ ಕಾಯಬೇಕು ? ರೈತರಿಗೆ ರಿಯಾಯಿತಿಗಳು ಬಿಸಿಕ್ಕಿದೆ. ಅಗ್ರಿಕಲ್ಚರ್ ಕಮೀಷನ್‌ನವರು ಬೆಲೆ ಗೊತ್ತು ಮಾಡಿದಕ್ಕಿಂತ ಜಾಸ್ತಿ ಕೊಟ್ಟು, ಇವತ್ತು ಕೇಂದ್ರ ಸರ್ಕಾರ ನಮ್ಮ ಮೇಲೆ ದೂರು ಮಾಡುತ್ತಿದೆ.

ಶ್ರೀ ವಿ. ಎಲ್. ಶಿವಪ್ಪ.—ರಿಯಾಯಿತಿ ಕೊಟ್ಟಿರುವುದನ್ನು ಒಪ್ಪಿಕೊಂಡಿದ್ದೇನೆ. ಜೊತೆಗೆ ರೈತರ ಅಭಿವೃದ್ಧಿ ಕೂಡ ಗಮನಿಸಿ ಸಮಿತಿ ನಿರ್ಮಾಣ ಮಾಡಿ. ರೈತರಿಗೆ ಸಾಲ ಎಷ್ಟುಕೊಡಬೇಕು ? ಬಡ್ಡಿ ಎಷ್ಟು ಕೊಡಬೇಕೆಂದು ನಿರ್ಧಾರ ಮಾಡಲಿ. ಇವತ್ತು ಕೈಗಾರಿಕೆಗಳಿಗೆ ಕೋಟಿಗಟ್ಟಲೆ ಹಣ ಕೊಟ್ಟು ೧೮ ಪರ್ಸೆಂಟ್ ಸಬ್ಸಿಡಿ ಕೊಡುತ್ತೀರಿ. ಅದೇರೀತಿ ವ್ಯವಸಾಯವನ್ನು ಸಹ ಕೈಗಾರಿಕೆಯೆಂದು ತಿಳಿದು ವ್ಯವಸಾಯ ಅಭಿವೃದ್ಧಿಗೆ ಗಮನ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಸಹಕಾರ ಸಂಘಗಳಲ್ಲಿ ಕೆಲಸ ಮಾಡಿದ್ದಾರೆ. ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಕೂಡ ಕೆಲಸ ಮಾಡಿದ ಅನುಭವ ಅವರಿಗೆ ಇದೆ. ಬಡ್ಡಿ ನೀತಿ ನಮ್ಮ ರಿಸರ್ವ್ ಬ್ಯಾಂಕನ್ನು ಅವಲಂಬಿಸಿದೆ. ರಿಸರ್ವ್ ಬ್ಯಾಂಕಿನವರು ಕೊಟ್ಟ ಆದೇಶದಂತೆ ಮಾಡುತ್ತೇವೆ. ರೈತರ ಬಗ್ಗೆ ಕಳಕಳಿ ಎಲ್ಲರಿಗೂ ಇದೆ. ಸರ್ಕಾರ ಪೂರ್ಣವಾಗಿ ರೈತರ ಸಮಸ್ಯೆಗಳನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ಈ ಮನೆಯ ಎಲ್ಲಾ ಸದಸ್ಯರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ನೇಮಕ ಮಾಡಿ, ಸಮಗ್ರವಾದ ಒಂದು ವರದಿಯನ್ನು ತರಿಸಿಕೊಳ್ಳುವುದಕ್ಕೆ ಸರ್ಕಾರ ಏರ್ಪಾಡು ಮಾಡುತ್ತದೆಯೆ ? ತಾತ್ಕಾಲಿಕ ವರದಿಯ ಶಿಫಾರಸ್ಸುಗಳೇನು ಎಂಬುದನ್ನು ದಯವಿಟ್ಟು ತಿಳಿಸಬೇಕು ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸ್ವಾಮಿ, ನಾನು ಈಗಾಗಲೇ ಪ್ರತಿಯೊಂದನ್ನು ಹೇಳಿದ್ದೇನೆ. ಬೇಕಾದರೆ ವರದಿಯನ್ನು ಓದಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಆರ್. ರಾಜಗೌಡ.—ರೈತರ ಸಂಕಷ್ಟಗಳನ್ನು ನಿವಾರಣೆ ಮಾಡುವುದಕೋಸ್ಕರ ಮಾನ್ಯ ಸದಸ್ಯರನ್ನೊಳಗೊಂಡಂತ ಒಂದು ಸಮಿತಿಯನ್ನು ಮಾಡಿ ವರದಿಯನ್ನು ತರಿಸಿಕೊಳ್ಳುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ಸದಸ್ಯರ ಕಮಿಟಿ ಏನು ? ಮಂತ್ರಿಗಳನ್ನೇ ಸಮಿತಿಗೆ ನೇಮಿಸಲಾಗಿತ್ತು. ಇನ್ನೊಂದು ಸಮಿತಿ ಮಾಡುವುದು ಸಾಧುವಲ್ಲವೆಂದು ನಾನು ಭಾವಿಸುತ್ತೇನೆ.

Repairs to Distributary of Bhadra Project

539 SRI SHEERNALY CHANDRASHEKHAR (Hosanagar).—Will the Minister of State for Major & Medium Irrigation be pleased to state.-

(a) whether it is a fact that the record pertaining to repair work of 27th distributary of Bhadra Project is pending before Government since a long time for Administrative sanction ;

(b) whether the Government is aware that the ryots belonging to Kudli area of Shimoga Taluk are suffering on account of inadequate water supply for irrigation from Bhadra even for one crop ;

(c) whether Government have taksn any decision to solve this problem ?

SRI B. B. CHIMMANA KATTY (Minister of State for Major and Medium Irrigation). —

(a) No.

(b) No.

(c) Does not arise.

ಶ್ರೀ ಎಂ. ಶೀರ್ನಾಳಿ ಚಂದ್ರಶೇಖರ್.—ಅಧ್ಯಕ್ಷರೇ, ನಾವು ಪ್ರಶ್ನೆ ಹಾಕುವುದನ್ನೇ ಬಿಡುವುದು ವಾಸಿ ಅಂತ ಕಾಣುತ್ತೆ. ಸ್ವಾಮಿ, ಕಳೆದ ವರ್ಷ ಜುಲೈ ೨೬ ರಂದು ನಾನು ಈ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯ ಮಂತ್ರಿಗಳ ಪರವಾಗಿ ಉತ್ತರ ಕೊಟ್ಟಿದ್ದಾರೆ. ನಾನು ಇದೇ ಪ್ರಶ್ನೆಯನ್ನು ಕೇಳಿದ್ದೇನೆ.

"ಭದ್ರಾವತಿ ಕೆನಾಲನ್ನು ಸುಧಾರಣೆ ಮಾಡುವ ಸಲುವಾಗಿ ೪೫೦ ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟ್ ತಯಾರಿಸಲಾಗಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಇದು ಕಾರ್ಯಗತವಾದಾಗ ೪೦ ಕ್ಯೂಸೆಕ್ಸ್‌ನಷ್ಟು ನೀರು ಸಿಗುವುದರಿಂದ ಅಲ್ಲಿನ ರೈತರ ಸಮಸ್ಯೆ ಬಹಳ ಮಟ್ಟಿಗೆ ಸುಧಾರಣೆಯಾಗುತ್ತದೆ. ಮತ್ತು ಅಲ್ಲಿನ ರೈತರಿಂದ ಏನು ದೂರುಗಳು ಬರುತ್ತಿವೆ. ಅದನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದ್ದಾರೆ.

ನನ್ನ ಎರಡನೇ ಪ್ರಶ್ನೆಗೆ ಉತ್ತರ ಕೊಡುತ್ತಾ,

ನೀರು ಸರಿಯಾಗಿ ಪಂಚಿಕೆಯಾಗುತ್ತಿಲ್ಲವೆಂಬ ಬಗ್ಗೆ ರೈತರಿಂದ ದೂರುಗಳು ಬಂದಿವೆ. ಅದಕ್ಕಾಗಿ ಕೆಲವು ಯೋಜನೆಗಳನ್ನು ಈಗ ಹಾಕಿಕೊಂಡಿದ್ದೇವೆ. ಏನೆಂದರೆ ೫ ದಿವಸ ನೀರು ಬಿಡುವುದು ೫ ದಿವಸ ನಿಲ್ಲಿಸುವುದು, ಹೀಗೆ ಮಾಡಿ ಎಲ್ಲರಿಗೂ ನೀರು ಸಿಗುವಂತಹ ವ್ಯವಸ್ಥೆ ಮಾಡುತ್ತಿದ್ದೇವೆ. ಇದರ ಜೊತೆಗೆ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇವನ್ನು ಯಾವ ರೀತಿ ರೀ ಮಾಡಲಿಂಗ್ ಮಾಡಬೇಕೆಂಬುದೂ ಸಹ ಸರ್ಕಾರದ ಪರಿಶೀಲನೆಯಲ್ಲಿದೆ. ಬರುವ ಹಣಕಾಸಿನ ವರ್ಷದಲ್ಲಿ ಈ ಕೆಲಸವನ್ನು ಮಾಡಲು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ.